
ನಡುವೆಯೇ ಘಟಿಸುತ್ತಿತ್ತು. ನನ್ನ ಇಷ್ಟಾನಿಷ್ಟಗಳನ್ನು ಕೇಳುವವರಾರು? ಸೇಲ್ಸ್ ರೆಪ್ ಅಂತ ಹೊರ ಊರುಗಳನ್ನು ಸಾಕಷ್ಟು ಸುತ್ತಾಡಿ ತಿಂಗಳಿಗೆ ನಾಲ್ಕೈದು ದಿನ ಇಲ್ಲಿದ್ದರೆ ಹೆಚ್ಚು. ಹೇಳಿಕೊಳ್ಳುವಂತ ರಸಿಕತೆಯೂ ಕಾಣೆ. ಮದುವೆಗೆ ಮೊದಲೇ ಬೇರೆ ಮನೆ ಮಾಡಿದ್ದರಿಂದ ನಾನು ನನ್ನ ಸಂಸಾರ ಅಷ್ಟೇ. ಹೇಮಾಂಗ ಹುಟ್ಟಿದ ಮೇಲೆ ಅವನ ಕಡೆ ನನ್ನ ಗಮನ ಹರಿದು ಉಳಿದೆಲ್ಲ ಗೌಣವಾಗಿದ್ದವು.

***

ಅರ್ಜಿ ತುಂಬಲು ಬೇಕಾದ ಅಗತ್ಯ ಮಾಹಿತಿಗಳನ್ನೂ ಒಂದು ಕಡೆ ಇಟ್ಟುಕೊಂಡು ತಪ್ಪಿಲ್ಲದಂತೆ ಅರ್ಜಿ ತುಂಬಿ ಸಹಿ ಹಾಕಿದೆ. ಮರುದಿನವೇ ಅರ್ಜಿಯನ್ನು ಕೊಡುವುದು ಲೇಸೆನಿಸಿ ಅಗತ್ಯ ಪ್ರಮಾಣಪತ್ರಗಳ ಮೂಲ ದಾಖಲೆ, ಕಾಪಿಗಳು, ನಾಲ್ಕೈದು ಫೋಟೋಗಳು ಅರ್ಜಿಯೊಂದಿಗೆ ಬೇರೊಂದು ಕವರಿನಲ್ಲಿ ಇಟ್ಟು ಮಲಗಿದೆ. ನಿದ್ದೆ ಬಾರದು. ಮನೆಗೊಬ್ಬ ಯಜಮಾನ ಅನ್ನುವುದು ಇಲ್ಲದೆ ಯಾಕೋ ಶೂನ್ಯ ಅನ್ನಿಸಿತು. ಅವರ ಗೈರಿನಲ್ಲಿ ಮನೆಯ ಬಾಧ್ಯತೆ ನನ್ನದೇ ಆಗಿದ್ದರೂ ಅವರು ಇಂದೋ ನಾಳೆ ಬರುತ್ತಾರೆ ಎನ್ನುವ ನಿರೀಕ್ಷೆ ಇರುತ್ತಿತ್ತು. ಬಂದರೂ ಹೆಚ್ಚಿನ ಮಾತುಕತೆ ಇರದು. ಆಫೀಸಿನ ರಿಪೋರ್ಟ್‌ಗಳನ್ನು ಅಣಿಮಾಡುವುದೇ ಆಗುತ್ತಿತ್ತು. ಮೊದಮೊದಲು ನನಗೆ ಬೇಸರವಾಗುತ್ತಿದ್ದರೂ ನಾನು ಅದಕ್ಕೆ ಹೊಂದಿಕೊಂಡು ರಗಳೆ ಮಾಡಲು ಹೋಗುತ್ತಿರಲಿಲ್ಲ. ಹೋಗುವುದಾದರೂ ಎಲ್ಲಿಗೆ? ತವರು ಗಟ್ಟಿಯಿಲ್ಲದಿದ್ದರೆ ಇದೇ ಬದುಕೇ, ಬೇಕಾದರೂ ಬೇಡವೆಂದರೂ. ಎಷ್ಟೋ ಮದುವೆ, ಮುಂಜಿ, ಕೌಟುಂಬಿಕ ಕಾರ್ಯಕ್ರಮಗಳಲ್ಲಿ ಅವರಿಲ್ಲದೆ ನಾನು ಮತ್ತು ಹೇಮು ಮಾತ್ರ ಭಾಗವಹಿಸುತಿದ್ದೆವು. ಅವರು ಟೂರ್‌ನಲ್ಲಿದ್ದಾರೆ ಎಂಬ ಒಂದೇ ಉತ್ತರ.

ಕೈಗೆಟುಕುವ ಶಾಲೆಯಲ್ಲಿ ಹೇಮುವನ್ನು ಸೇರಿಸಿದ್ದೆ. ಕ್ರಮೇಣ ನಮ್ಮ ಆರ್ಥಿಕ ಸ್ಥಿತಿಗತಿ ಅವಲಂಬನೆ ಎಲ್ಲವೂ ಅವನಿಗೂ ಅರ್ಥವಾಗುತ್ತಿತ್ತು. ಸದ್ಯ, ಕೆಟ್ಟ ಚಟಗಳಿಲ್ಲ, ಕ್ರೌರ್ಯವಿಲ್ಲ, ಅಷ್ಟರಮಟ್ಟಿಗೆ ಒಳ್ಳೆಯ ವ್ಯಕ್ತಿ. ಒಬ್ಬರ ಹಂಗಿಲ್ಲದೆ ನಮ್ಮ ಪಾಡಿಗೆ ನಾವಿದ್ದೆವು. ಆ ದಿನ ಟೂರ್‌ನಿಂದ ವಾಪಸ್ ಬಂದು ಆಫೀಸಿಗೆ ರಿಪೋರ್ಟ್ ಆಗಿದ್ದರು. ಸಂಜೆ ಹೊತ್ತಿಗೆ ಆಫೀಸಿನಲ್ಲಿ ಕುಸಿದಿದ್ದರು. ಆಸ್ಪತ್ರೆಯಲ್ಲಿ ನೀಡಿದ್ದ ಚಿಕಿತ್ಸೆಗೆ ಸ್ಪಂದನವಿಲ್ಲ. ಅವರ ಆಫೀಸಿನಿಂದ ಪರಿಹಾರವಾಗಿ ಒಂದಷ್ಟು ದುಡ್ಡು ಸಿಕ್ಕಿತ್ತು. ಅನುಕಂಪದ ಆಧಾರದಲ್ಲಿ ಕೆಲಸಕ್ಕೆ ನನಗೇ ಅವಕಾಶವಿದೆ ಎಂದು ತಿಳಿದಾಗ ಹೇಮುವಿನಲ್ಲಿ ಒಂದು ಮಾತು ಕೇಳಿದೆ.

‘ಖಂಡಿತ ನೌಕರಿಗೆ ಸೇರು, ಇನ್ನೆರಡು ವರ್ಷದಲ್ಲಿ ನನಗೆ ಎಲ್ಲೋ ಒಂದು ಕಡೆ ಆಗುತ್ತದೆ. ನಿನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಿಕ್ಕ ಅವಕಾಶ ಬಿಡುವುದು ಬೇಡ' ಎಂದಿದ್ದ. ಆರ್ಥಿಕವಾಗಿ ಮುಂದೆ ಹೇಗೆ ಎನ್ನುವುದಕ್ಕೆ ಉತ್ತರ ಸಿಕ್ಕಿತ್ತು.



***

ಹೆಚ್ ಆರ್ ಡಿಪಾರ್ಟ್‌ಮೆಂಟಿನಲ್ಲಿ ಕೇಸ್ ಅಸಿಸ್ಟೆಂಟ್ ಮುಂದೆ ಕುಳಿತಿದ್ದೆ. ಆಕೆ ನನ್ನ ಅರ್ಜಿಯನ್ನು ಕೂಲಂಕಷವಾಗಿ ಪರಿಶೀಲಿಸಿ, ‘ಒಂದೆರಡು ಸಹಿ ನಮ್ಮವರದೇ ಬೇಕು, ನಾನು ವ್ಯವಸ್ಥೆ ಮಾಡಿಕೊಳ್ಳುವೆ ಅಡ್ಡಿಯಿಲ್ಲ' ಎಂದಾಗ ‘ಥ್ಯಾಂಕ್ಸ್ ಮೇಡಂ' ಎಂದು ಕೈಜೋಡಿಸಿದೆ. ‘ಹಾಂ, ನಿಮ್ಮ ಗಮನಕ್ಕೆ ಇನ್ನೊಂದು ವಿಷಯ, ಈ ಊರಲ್ಲಿ ತಕ್ಷಣಕ್ಕೆ ಯಾವುದೇ ಹುದ್ದೆ ಖಾಲಿ ಇಲ್ಲ. ಬೇರೆ ಎಲ್ಲಾದರೂ ಸರಿ ಎನ್ನುವುದಾದರೆ ಅದಕ್ಕೊಂದು ಡಿಕ್ಲರೇಷನ್ ಕೊಡಬೇಕು' ಎಂದಾಗ ‘ಹೌದು ಮೇಡಂ, ಹೇಳಿದ್ದಿರಿ' ಎಂದೆ.

‘ಹಾಗಿದ್ದರೆ ಇದರಲ್ಲೊಂದು ಸಹಿ', ಅವರು ಕೊಟ್ಟ ಅರ್ಜಿಗೆ ಸಹಿ ಹಾಕಿದೆ.

‘ನಿಮಗೆ ತಿಳಿಸ್ತೇವೆ, ಮೊಬೈಲ್ ನಂಬರ್ ಕೊಟ್ಟಿದ್ದೀರಲ್ಲ'.

‘ಹೌದು ಮೇಡಂ, ವಾಟ್ಸಾಪ್ ಇದೇ ನಂಬರಿನಲ್ಲಿದೆ'.

‘ಸರಿ, ನೀವಿನ್ನು ಹೊರಡಬಹುದು' ಎಂಬ ಸೂಚನೆಗೆ ಮತ್ತೊಮ್ಮೆ ಕೈಮುಗಿದು ಹೊರಬಂದೆ.

***

ಬಸ್ಸಿಗೆ ಕಾಯುತ್ತಿದ್ದೆ. ನೇರ ರೂಟ್ ಸಿಕ್ಕರೆ ಸರಿ ಇಲ್ಲದಿದ್ದರೆ ಎರಡು ಬಸ್ ಹಿಡಿದು ಮನೆಗೆ ಹೋಗಬೇಕು. ಐದೇ ನಿಮಿಷಕ್ಕೆ, ನನ್ನ ಅದೃಷ್ಟಕ್ಕೆ ನೇರ ಮನೆಯ ಬಳಿ ಇಳಿಯುವ ಬಸ್ ಬಂತು. ಅದೂ ಸೀಟು ಖಾಲಿಯಿದ್ದದ್ದು ಕಿಟಕಿಯ ಪಕ್ಕದ ಸೀಟಿನಲ್ಲಿ ಕುಳಿತೆ. ಆಧಾರ್ ತೋರಿಸಿ ಗಮ್ಯ ಹೇಳಿದೆ. ಟಿಕೆಟ್ ಕೈಗೆ ಬಂತು, ಅದೂ ಪುಕ್ಕಟ್ಟೆ! ಅಷ್ಟರಮಟ್ಟಿಗೆ ಉಳಿತಾಯ. ಈಗಿರುವ ಸ್ಥಿತಿಯಲ್ಲಿ ಒಂದೊಂದು ರೂಪಾಯಿಯೂ ಮೌಲ್ಯಯುತವೇ. ಬೇರೆ ಊರಾದರು ಪರವಾಗಿಲ್ಲ ಎಂಬ ನಿರ್ಧಾರ ಸರಿಯೇ ಅಥವಾ ದುಡುಕಿದೆನೆ ಎಂದು ಕ್ಷಣ ಆಲೋಚನೆಗೆ ಬಿದ್ದೆ. ಇಲ್ಲಿಯೂ ಸರತಿಯಲ್ಲಿ ನನಗಿಂತ ಮೊದಲು ಇರುವವರು ಅಥವಾ ವರ್ಗಾವಣೆ ಕೋರಿ ಬರುವವರೋ ಇದ್ದಲ್ಲಿ ನನಗೆ ಪ್ರಾಶಸ್ತ್ಯ ಸಿಗುವುದು ಕಷ್ಟ. ಆ ನಂತರ ಇಲ್ಲಿಲ್ಲ ಬೇರೆ ಕಡೆ ಹೋಗ್ತೀರಾ ಎಂದರೂ ಹೋಗುವ ಅನಿವಾರ್ಯತೆ ಇದೆ. ಅಲ್ಲಿಯತನಕ ಮನೆ ಬಾಡಿಗೆ ವಗೈರೆ ಇಲ್ಲೂ ಕೊಡಲೇಬೇಕು ಯಾವುದೇ ವರಮಾನವಿಲ್ಲದೆ.

ಅವರು ಗತಿಸಿದ ಮೇಲೆ ಮೂರು ತಿಂಗಳಿಗೆ ಆಫೀಸಿನಿಂದ ಸೆಟಲ್‌ಮೆಂಟ್ ಆಗಿದ್ದು, ಅಲ್ಲಿವರೆಗೆ ತಿಂಗಳ ಸಂಬಳವಿಲ್ಲದೆ ಪಟ್ಟಪಾಡು ಸಾಕೆನಿಸಿತ್ತು. ಬಂದ ಹಣದಲ್ಲಿ ಸ್ವಲ್ಪ ಭಾಗ ಉಳಿತಾಯ ಖಾತೆಯಲ್ಲಿಟ್ಟು ಉಳಿದದ್ದು ಎಫ್‌ಡಿ ಹಾಕಿ ಅದರ ಬಡ್ಡಿಯ ನಿರೀಕ್ಷೆಯಲ್ಲಿ ದಿನ ಸವೆಸುತ್ತಿರುವುದಾಗಿದೆ. ಮನೆ ಓನರ್ ಬೇರೆ, ‘ನೀವು ತುಂಬಾ ವರ್ಷದಿಂದ ಇದ್ದೀರಿ ಅಂತ ಬಾಡಿಗೆ ಜಾಸ್ತಿ ಮಾಡದೇ ಕಡಿಮೆಗೆ ಕೊಟ್ಟಿದ್ದೀನಿ. ಈಗ ಕೊಡೋದಾದ್ರೆ ದುಪ್ಪಟ್ಟು ಬಾಡಿಗೆ ಸಿಗುತ್ತೆ' ಅಂತ ಕಹಿ ಕಾರಿದ್ದ. ಈಗ ನನಗೊಬ್ಬಳಿಗೆ ಇಷ್ಟು ಬಾಡಿಗೆ ಕೊಡುವುದು ದುಬಾರಿ ಎಂದೇ ಅನ್ನಿಸುತ್ತದೆ. ಅದೂ ಖಾಲಿ ಕೈಯಲ್ಲಿ. ಯಾವ ಊರಾದರೇನು? ನಮ್ಮ ಅಗತ್ಯಕ್ಕೆ ಹೊಂದಿಕೊಂಡು ಹೋಗಬೇಕು. ಆಫೀಸಿನಲ್ಲಿ ಅನೌಪಚಾರಿಕವಾಗಿ ಹೇಳಿರುವಂತೆ ಅಬ್ಬಬ್ಬಾ ಅಂದರೆ ಒಂದು ತಿಂಗಳು ಅಥವಾ ಬೇರೆ ಊರು ಅಂದರೆ ಇನ್ನೂ ಮೊದಲೇ ಸಿಗಬಹುದು. ಹೇಮು ಓದು ಮುಗಿದ ಮೇಲೆ ಅವನಿಗೆಲ್ಲಿ ಕೆಲಸ ಸಿಗುವುದೋ? ಒಂದೊಮ್ಮೆ ಇಲ್ಲೇ ಸಿಕ್ಕರೂ ಈಗಿರುವ ಮನೆಯನ್ನು ಒಪ್ಪಲಾರ ಸಂಬಳಕ್ಕೆ ತಕ್ಕಂತೆ ಇರಬಯಸುವ ಮನಸ್ಸು ಇದ್ದೇ ಇರುತ್ತದೆ. ಅದು ಅವನಿಚ್ಛೆ. ಬೇರೆ ಊರಲ್ಲಿ ನೌಕರಿ ಎಂದರೆ ಮನೆ ಶಿಫ್ಟ್ ಆಗಬೇಕು. ಆಗ ಹೇಮು ಒಂದೆರಡು ದಿನ ರಜ ಹಾಕಿ ಬಂದಾನು. ಯೋಚನೆಯಲ್ಲಿ ಮುಳುಗಿದವಳಿಗೆ ‘ಲಾಸ್ಟ್ ಸ್ಟಾಪ್' ಕಂಡಕ್ಟರನ ದನಿ ಕೇಳಿದಾಗ ಎಚ್ಚರಗೊಂಡೆ.

***

ಬೇರೆ ಊರಿಗೆ ತೆರಳಬೇಕಾಗ ವಿಷಯವನ್ನು ಹೇಮುವಿಗೆ ತಿಳಿಸಿದೆ. ‘ಹೋಗ್ಲಿ ಬಿಡಮ್ಮ ಅದನ್ನೂ ನೋಡಿದರಾಯಿತು' ಎಂದು ಪ್ರೋತ್ಸಾಹಿಸಿದ. ಇದಾದ ಹತ್ತೇ ದಿನಕ್ಕೆ ಆಫೀಸಿನಿಂದ ಕರೆ ‘ನಿಮ್ಮ ನೇಮಕಾತಿ ಪತ್ರವನ್ನು ಖುದ್ದು ಪಡೆಯಬಹುದು ಅಥವಾ ಅಂಚೆ ಮೂಲಕ ಕಳುಹಿಸುತ್ತೇವೆ' ಎಂದಾಗ ‘ಈಗಲೇ ಹೊರಟು ಬರುವೆ' ಎಂದು ಉತ್ತರಿಸಿ ಲಗುಬಗೆಯಿಂದ ತಯಾರಾಗಿ ಒಂದೇ ಉಸಿರಿಗೆ ಆಫೀಸ್ ತಲುಪಿದ್ದೆ.

‘congratulations' ಕೇಸ್ ಅಸಿಸ್ಟೆಂಟ್ ಒಂದೆರಡು ರಿಜಿಸ್ಟರ್‌ಗಳಲ್ಲಿ ಸೈನ್ ಮಾಡಿಸಿಕೊಂಡು ಆದೇಶ ಪತ್ರ ಕೊಟ್ಟರು. ಓದಿದೆ. ಹೊಸ ಊರು ಯಾವುದೊ ಎಂಬ ಕುತೂಹಲ ಕಳೆದಿತ್ತು. ‘ಥಾಂಕ್ಸ್ ಮೇಡಂ, ನನ್ನ ತಂಗಿಯ ಊರು...' ಸಂತೋಷದಿಂದ ತಡವರಿಸಿದ್ದೆ. ‘ಹದಿನೈದು ದಿನಗಳೊಳಗೆ ರಿಪೋರ್ಟ್ ಮಾಡಿಕೊಳ್ಳಿ' ಎಂದು ಹೇಳಿ ಬೀಳ್ಕೊಟ್ಟರು.

***

ಮನೆಯನ್ನು ತಲುಪಿ ಮೊದಲು ಮಾಡಿದ ಕೆಲಸ ಪತ್ರವನ್ನು ದೇವರ ಮುಂದಿಟ್ಟು ತಲೆಬಾಗಿದ್ದು. ಭೌತಿಕವಾಗಿ ಇಲ್ಲದಿದ್ದರೂ ನನ್ನ ಊಟಕ್ಕೊಂದು ಮಾರ್ಗ ತೋರಿಸಿದ ನನ್ನವರನ್ನು ನೆನೆದು ಮನಸ್ಸಲ್ಲೇ ವಂದಿಸಿದೆ. ಹೇಮುವಿಗೆ ಮೆಸೇಜ್ ಹಾಕಿ ನನ್ನ ತಂಗಿ ಭಾಗೀರತಿಗೆ ಮಾತನಾಡಿ ವಿಷಯ ತಿಳಿಸಿ ‘ಸಣ್ಣ ಮನೆಯಾದ್ರು ಸಾಕು ನೋಡಿರು, ನಾಳೆ ಬರ್ತೀನಿ' ಎಂದೆ.

‘ಅಕ್ಕ ಒಂದು ಕೆಲಸ ಮಾಡು ಮನೆ ಸಿಗೋವರೆಗೆ ನನ್ನ ಮನೇಲಿರು, ಆಮೇಲೆ ಒಂದೇ ಸಲಕ್ಕೆ ಶಿಫ್ಟ್ ಆಗು' ಎಂದಾಗ ಅದೂ ಸರಿಯೆನ್ನಿಸಿತು. ಆದರೆ ನನ್ನ ಪರಿಸ್ಥಿತಿಯಲ್ಲಿ ಅವರ ಅತ್ತೆ ಒಪ್ಪುವರೇ, ಮೊದಲೇ ಆಚಾರವಂತರು? ನನ್ನ ಸಂದೇಹಕ್ಕೆ ಅವಳಲ್ಲಿ ಉತ್ತರವಿತ್ತು. ‘ದೊಡ್ಡ ಅಳಿಯ ತೀರಿಕೊಂಡ ಮೇಲೆ ಸಾಕಷ್ಟು ಬದಲಾಗಿದ್ದಾರೆ. ಮುಳ್ಳು ತಮ್ಮ ಕಾಲಿಗೆ ಚುಚ್ಚಿದ ಮೇಲೆ ಅದರ ನೋವು ಎಂಥದ್ದು ಅಂತ ಗೊತ್ತಾಗೋದು ಅಲ್ವಕ್ಕ?,